★★★

ವಸುಮತಿ ತನ್ನನ್ನಾವರಿಸಿದ ಭಯದಿಂದ ಬಿಡುಗಡೆಗೊಳ್ಳಲು ತನ್ನ ಮನದ ಬೇಗುದಿಯನ್ನು ಬ್ಯಾಂಕಿನಲ್ಲಿ ಎಲ್ಲರ ಸಮಸ್ಯೆಗಳಿಗೂ ಒಂದಿಲ್ಲೊಂದು ಪರಿಹಾರ ಸೂಚಿಸುವ, ವಿಶೇಷವಾಗಿ ಮಹಿಳಾ ಸಹೋದ್ಯೋಗಿಗಳ ವಲಯದಲ್ಲಿ ಕೌನ್ಸಿಲರ್ ಎಂದೇ ಖ್ಯಾತಳಾದ ಸರಳಾ ದೇಶಪಾಂಡೆ ಎದುರು ಹೊರಹಾಕಿದ್ದೆ ಎಡವಟ್ಟಾಯಿತು. ಪ್ರಭಂಜನನ ನಿರ್ಲಿಪ್ತತೆ ಬೇರೆಬೇರೆ ವ್ಯಾಖ್ಯಾನಗಳನ್ನು ಪಡೆಯುತ್ತ ದಿನಕ್ಕೊಂದು ಹೊಸ ಅರ್ಥ ಹುಟ್ಟಿಸತೊಡಗಿತು. ಐವತ್ತರ ನಂತರ ಗಂಡಸರಿಗೆ ತಮ್ಮ ಹೆಂಡತಿಯನ್ನು ಹೊರತುಪಡಿಸಿ ಪ್ರಪಂಚದಲ್ಲಿರುವ ಬೇರೆ ಎಲ್ಲ ಹೆಂಗಸರೂ ತ್ರಿಲೋಕ ಸುಂದರಿಯರಾಗಿ ಕಾಣಿಸುವರೆಂದು, ಹೊರಗೆ ಮೇಯುವ ಚಾಳಿ ಬೆಳೆಸಿಕೊಂಡು ಹೆಂಡತಿಯೆದುರು ಏನೂ ಗೊತ್ತಿಲ್ಲದ ಸಂಭಾವಿತರಂತೆಯೂ ನಿರ್ಲಿಪ್ತರಂತೆಯೂ ನಡೆದುಕೊಳ್ಳುವರೆಂದು, ಹೆಂಡತಿ ಪಕ್ಕದಲ್ಲಿ ಮಲಗಿ ಕರೀನಾನೋ ಕತ್ರಿನಾಳನ್ನೋ ಕನವರಿಸುವರೆಂದು ಸರಳಾ ದೇಶಪಾಂಡೆ ಭಯಂಕರ ಗುಟ್ಟೊಂದನ್ನು ಹೊರಗೆಡವಿದಳು. ಜೊತೆಗೆ ತಮ್ಮದೇ ಬ್ಯಾಂಕಿನ ಮೂರ್ನಾಲ್ಕು ಗಂಡು ಸಹೋದ್ಯೋಗಿಗಳನ್ನು ಉದಾಹರಣೆ ಸಹಿತ ಹೆಸರಿಸಿ ವಸುಮತಿಯಲ್ಲಿ ಏಕಕಾಲಕ್ಕೆ ಭಯ ಮತ್ತು ಗಂಡನ ಮೇಲೆ ಅನುಮಾನ ಇನ್ನಷ್ಟು ಹೆಚ್ಚಲು ಕಾರಣಳಾದಳು. ಈಗ ವಸುಮತಿಗೆ ಪ್ರಭಂಜನನನ್ನು ವಿವಿಧ ರೀತಿಯಿಂದ ಪರೀಕ್ಷಿಸಿ ನೋಡುವುದು ದಿನನಿತ್ಯದ ಕೆಲಸದ ಜೊತೆಗೆ ಮತ್ತೊಂದು ಹೊಸ ಕೆಲಸವಾಯಿತು. ಪ್ರಭಂಜನನ ಜೇಬು ತಡಕಾಡುವುದರೊಂದಿಗೆ ಆರಂಭಗೊಂಡ ವಸುಮತಿಯ ತಪಾಸಣೆ ಅವನ ಮೊಬೈಲ್, ವಾಟ್ಸ್‌ಆ್ಯಪ್, ಫೇಸ್‌ಬುಕ್, ಇ–ಮೇಲ್, ಇನ್‌ಸ್ಟಾಗ್ರಾಮ್, ಟ್ವಿಟರ್‌ಗಳನ್ನು ಜಾಲಾಡುವುದರ ತನಕ ಮುಂದುವರೆಯಿತು. ಯಾವ ಸುಳಿವು ಸಿಗದೆ ಹೋದಾಗ ಪ್ರಭಂಜನ ತುಂಬ ಹುಷಾರಾಗಿ ಸರಳಾ ದೇಶಪಾಂಡೆ ಉಲ್ಲೇಖಿಸಿದ ಆ ಎಲ್ಲ ಚಟುವಟಿಕೆಗಳಲ್ಲಿ ತನ್ನನ್ನು ತೊಡಗಿಸಿಕೊಂಡಿರಬಹುದೆನ್ನುವ ತೀರ್ಮಾನಕ್ಕೆ ವಸುಮತಿ ಬಂದಿದ್ದಳು.

ಈಗೀಗ ವಸುಮತಿಗೆ ಕನ್ನಡಿ ಎದುರು ಗಂಟೆಗಟ್ಟಲೆ ನಿಂತು ಅಲಂಕರಿಸಿಕೊಳ್ಳುವ ಹೊಸ ಅಭ್ಯಾಸವೊಂದು ಶುರುವಾಗಿದೆ. ಮೊದಲೆಲ್ಲ ಮುಖಕ್ಕೆ ಒಂದಿಷ್ಟು ಪೌಡರ್ ಲೇಪಿಸಿ ನೆಪಕ್ಕೆ ಎನ್ನುವಂತೆ ತಲೆಯ ಮೇಲೆ ಬಾಚಣಿಗೆ ಆಡಿಸಿಕೊಂಡು ಜುಟ್ಟಿಗೊಂದು ಹೇರ್‌ಬ್ಯಾಂಡ್ ಸಿಕ್ಕಿಸಿ ಕೆಲಸಕ್ಕೆ ತಡವಾಯಿತೆಂದು ಮನೆಗೆ ಬೀಗಹಾಕಿ ಓಡುತ್ತಿದ್ದವಳು ಈಗ ಬೆಡ್‌ರೂಮಿನ ಅಲ್ಮೆರಾದ ನಿಲುವುಗನ್ನಡಿ ಎದುರು ಹೆಚ್ಚಿನ ಸಮಯ ಕಳೆಯುವುದನ್ನು ರೂಢಿಸಿಕೊಂಡಿರುವಳು. ರಿಟೈರ್ಡ್ ಆಗಲು ಒಂದು ವರ್ಷವಷ್ಟೇ ಬಾಕಿ ಇರುವ ಮ್ಯಾನೇಜರ್ ಶ್ರೀಧರ ರಾವ್ ಬ್ಯಾಂಕಿಗೆ ಬಂದುಹೋಗುವ ಮಹಿಳಾ ಗ್ರಾಹಕರನ್ನು ಯಾವ ಯಾವುದೋ ಕಾರಣ ಮುಂದೆಮಾಡಿಕೊಂಡು ಮಾತನಾಡಿಸುವುದು, ಪಾಸ್‌ಬುಕ್ ಕೊಡುವ ನೆಪದಲ್ಲಿ ಮೈ ಕೈ ಮುಟ್ಟುವುದು, ಆಗಾಗ ಪೋಲಿ ಜೋಕುಗಳನ್ನು ಹೇಳಿ ನಗುವುದನ್ನು ನೋಡಿ ವಸುಮತಿಗೆ ಪ್ರಪಂಚದಲ್ಲಿನ ಗಂಡಸರೆಲ್ಲ ಒಂದೇ ಜಾತಿಯವರೆಂದೆನಿಸಿ, ಇಡೀ ಗಂಡುಕುಲವೇ ನಂಬಿಕೆಗೆ ಅನರ್ಹ ಎನ್ನುವ ನಿರ್ಧಾರಕ್ಕೆ ಬಂದಿದ್ದಳು. ಪ್ರಭಂಜನ ಕೂಡ ಕಾಲೇಜಿನಲ್ಲಿ ಅಲ್ಲಿನ ಮಹಿಳಾ ಸಹೋದ್ಯೋಗಿಗಳೊಂದಿಗೆ ಇದೇ ರೀತಿ ವರ್ತಿಸುತ್ತಿರಬಹುದೆನ್ನುವ ಕಲ್ಪನೆಯಿಂದಲೇ ವಸುಮತಿ ಅದೆಷ್ಟು ದಿಗಿಲುಗೊಂಡಳೆಂದರೆ, ಮರುದಿನ ಬ್ಯಾಂಕಿಗೆ ರಜೆ ಹಾಕಿ, ಬ್ಯೂಟಿ ಪಾರ್ಲರಿಗೆ ಹೋಗಿ ಅಲ್ಲಿನ ಬ್ಯೂಟಿಶಿಯನ್‌ಗೆ ಮುಖಕೊಟ್ಟು ಕುಳಿತಳು. ಮಧ್ಯಾಹ್ನದ ಹೊತ್ತಿಗೆ ಮೇಕಪ್ ಎಂಬ ಮಾಯೆಯ ಸಕಲ ಚರಾಚರ ಕ್ರಿಯೆಗಳು ಪೂರ್ಣಗೊಂಡು ಕನ್ನಡಿಯಲ್ಲಿ ಹೊಳೆಯುತ್ತಿರುವ ತನ್ನ ಮುಖವನ್ನು ನೋಡಿದಾಗಲೇ ಅವಳಿಗೆ ಸಮಾಧಾನವಾಯಿತು.

ಸಾಯಂಕಾಲ ಕಾಲೇಜಿನಿಂದ ಮನೆಗೆ ಬಂದ ಪ್ರಭಂಜನನಿಗೂ ವಸುಮತಿ ಇವತ್ತು ಎಂದಿನಂತಿಲ್ಲ, ಅವಳಲ್ಲಿ ಏನೋ ಬದಲಾವಣೆಯಾದಂತಿದೆ ಎಂದೆನಿಸಿದರೂ ಅವನು ಪ್ರತಿದಿನದಂತೆ ಮುಖ ತೊಳೆದು